ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಿ. ಕೃಷ್ಣ ಎಸ್. ದೀಕ್ಷಿತ್

ಚಂದ್ರಶೇಖರ್ ಜಿ. -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು

ರಿಟ್ ಅರ್ಜಿಸಂಖ್ಯೆ: 2056/2018 (ಎಸ್-ಆರ್ಇಎಸ್), ದಿನಾಂಕ 18 ನೇ ನವೆಂಬರ್, 2019.

ಆಜ್ಞೆ

ನ್ಯಾಯಮೂರ್ತಿ ಶ್ರೀ ಕೃಷ್ಣ ಎಸ್. ದೀಕ್ಷಿತ್:

ಅರ್ಜಿದಾರನು ಮೈಸೂರು ನಗರ ಕಾರ್ಪೊರೇಷನ್ನಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕಾರನಿರ್ವಹಿಸುತ್ತಿದ್ದು, ನಿವೃತ್ತಿ ವೇತನ ಉದ್ದೇಶಕ್ಕಾಗಿ ಸರ್ಕಾರಿ ಶಾಲೆಯಲ್ಲಿ ಸಹಾಯಕ ಶಿಕ್ಷಕನಾಗಿ ಆತನು ಸಲ್ಲಿಸಿದ ಹಿಂದಿನ ಸಾರ್ವಜನಿಕ ಸೇವೆಯನ್ನು ಪರಿಗಣಿಸಲು, ಎರಡನೇ ಪ್ರತ್ಯರ್ಜಿದಾರ-ಪೌರಾಡಳಿತ ನಿರ್ದೇಶಕರಿಗೆ ನಿರ್ದೇಶಿಸಲು ಕೋರಿ ರಿಟ್ ನ್ಯಾಯಾಲಯದ ಬಾಗಿಲು ತಟ್ಟಿದ್ದಾನೆ.ಅರ್ಜಿದಾರನು ವೇತನ ರಕ್ಷಣೆ ಸಂಬಂಧದ ತನ್ನ ಅಹವಾಲನ್ನು ಸಹ ಮುಂದಿಟ್ಟಿದ್ದಾನೆ.

2. ನೋಟೀಸನ್ನು ಜಾರಿ ಮಾಡಿದ ನಂತರ, ಪ್ರತ್ಯರ್ಜಿದಾರರು ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ ಮತ್ತು 4 ನೇ ಪ್ರತ್ಯರ್ಜಿದಾರರ ಪರ ನ್ಯಾಯವಾದಿಯು ರಿಟ್ ಅರ್ಜಿಯನ್ನು ವಿರೋಧಿಸಿದ್ದಾರೆ.

3. ಅರ್ಜಿದಾರನು 30.01.2004 ರಿಂದ 19.12.2016 ರ ನಡುವಿನ ಕಾಲಾವಧಿಯಲ್ಲಿ ಸಹಾಯಕ ಶಿಕ್ಷಕನಾಗಿ ಕಾರ್ಯನಿರ್ವಹಿಸಿದ್ದಾನೆ; ಆತನುದಿನಾಂಕ: 20.12.2016 ರಿಂದ ಜಾರಿಗೆ ಬರುವಂತೆ ಮುಕ್ತ ಸ್ಪರ್ಧೆಯಲ್ಲಿ ಕರ್ನಾಟಕ ಲೋಕ ಸೇವಾ ಆಯೋಗವು ಆಯ್ಕೆ ಮಾಡಿದ್ದರಿಂದ, ಪ್ರತ್ಯರ್ಜಿದಾರ-ಮೈಸೂರು ನಗರಪಾಲಿಕೆಯಲ್ಲಿ ಪ್ರಥಮ ದರ್ಜೆ ಸಹಾಯಕನ ಹುದ್ದೆಗೆ ಸೇರಿಕೊಳ್ಳುವ ಸಲುವಾಗಿ ಸದರಿ ಹುದ್ದೆಗೆ ರಾಜೀನಾಮೆ ನೀಡಿದ್ದಾನೆ ಎಂದು ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

4. ಇದಲ್ಲದೆ, ಪೌರಾಡಳಿತ ಇಲಾಖೆಯು ಅಳವಡಿಸಿಕೊಂಡಿರುವ ಕರ್ನಾಟಕ ಸಿವಿಲ್ ಸೇವಾ ನಿಯಮಗಳ 235 ನೇ ನಿಯಮದ ಅಭಿಪ್ರಾಯದಲ್ಲಿ, ನಿವೃತ್ತಿ ವೇತನದ ಉದ್ದೇಶಕ್ಕಾಗಿ ಅರ್ಜಿದಾರನು ತನ್ನ ಹಿಂದಿನ ಸಾರ್ವಜನಿಕ ಸೇವೆಯನ್ನು ಪರಿಗಣಿಸಲು/ಲೆಕ್ಕ ಹಾಕಲು ಹಕ್ಕುಳ್ಳವನಾಗಿದ್ದಾನೆ; ಉತ್ತರಿಸುತ್ತಿರುವ ಪ್ರತ್ಯರ್ಜಿದಾರರಿಗೆ ಸಲ್ಲಿಸಿದ ಆತನ ಮನವಿಯನ್ನು ಒಪ್ಪದಿರುವುದರಿಂದ, ಸದರಿ ನಿಯಮಕ್ಕೆ ಮತ್ತು ನಿಯಮದ ಅಡಿಯಲ್ಲಿನ ಟಿಪ್ಪಣಿಗೆ ಅನುಗುಣವಾಗಿ ನಿರ್ದೇಶನಗಳನ್ನು ನೀಡಬೇಕಾದ ಅವಶ್ಯಕತೆ ಇದೆ ಎಂದು ಮಾನ್ಯ ನ್ಯಾಯವಾದಿಗಳು ನಿವೇದಿಸಿಕೊಂಡಿದ್ದಾರೆ.

5. ಪ್ರತ್ಯರ್ಜಿದಾರರ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು ಮತ್ತು 3 ನೇ ಪ್ರತ್ಯರ್ಜಿದಾರರ ಪರ ನ್ಯಾಯವಾದಿ ಅವರು ಈ ಮುಂದಿನಂತೆ ವಾದಿಸಿದ್ದಾರೆ:( ಎ) ಉದ್ಯೋಗಿಯು ಒಂದು ಇಲಾಖೆಯಲ್ಲಿನ ಸೇವೆಯನ್ನು ತೊರೆದು ಅದೇ ಸರ್ಕಾರದ ಇನ್ನೊಂದು ಇಲಾಖೆಯಲ್ಲಿ ಸೇವೆಗೆ ಸೇರಿದಾಗ ಮಾತ್ರ ಹಿಂದಿನ ಸೇವೆಯನ್ನು ಪರಿಗಣಿಸುವುದು ಸಾಧ್ಯ; ಮತ್ತು (ಬಿ) ಆದರೆ ಇಲ್ಲಿ ಹಿಂದಿನ ಸೇವೆಯನ್ನು ಸರ್ಕಾರದ ಯಾವುದೇ

ನಿರ್ದಿಷ್ಟ ಇಲಾಖೆಯಲ್ಲಿ ಸಲ್ಲಿಸದೆ ಬೇರೆಲ್ಲೋ ಸೇವೆ ಸಲ್ಲಿಸಿದ್ದಾನೆ, ಅದನ್ನು ನಿವೃತ್ತಿ ವೇತನದ ಉದ್ದೇಶಕ್ಕಾಗಿ ಪರಿಗಣಿಸಲಾಗುವುದಿಲ್ಲ/ಲೆಕ್ಕಹಾಕಲಾಗುವುದಿಲ್ಲ.

6. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ವಾದಗಳನ್ನು ಆಲಿಸಿ ಮತ್ತು ಅರ್ಜಿ ಸಂಬಂಧದ ದಾಖಲೆಗಳನ್ನು ಪರಿಶೀಲಿಸಿ, ಅರ್ಜಿದಾರನು ಈ ಮುಂದಿನ ಕಾರಣಗಳಿಗಾಗಿ ಕಾನೂನು ಹೋರಾಟದಲ್ಲಿ ಮುಂದುವರಿಯಲು ಹಕ್ಕುಳ್ಳವನಾಗಿದ್ದಾನೆಂದು ಈ ನ್ಯಾಯಾಲಯವು ಪರಿಗಣಿಸಿದೆ:

( 6) 235 ನೇ ನಿಯಮದ ಉಪಬಂಧಗಳು ಮತ್ತು ತತ್ಸಂಬಂಧಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕೆಲವು ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಉದ್ಯೋಗಿಯ ಹಿಂದಿನ ಸರ್ಕಾರಿ ಸೇವೆಯನ್ನು ಪರಿಗಣಿಸಲು ಉಪಬಂಧ ಕಲ್ಪಿಸುತ್ತವೆ; ಸದರಿ ನಿಯಮದ ಸಂಬಂಧಪಟ್ಟ ಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

"235. ರಾಜ್ಯದ ಸಂಚಿತ ನಿಧಿಯಿಂದ ಅಥವಾ ಸ್ಥಳೀಯ ನಿಧಿಯಿಂದ ಸರ್ಕಾರಿ ನೌಕರನಿಗೆ, ನಿವೃತ್ತಿ ವೇತನ ಬರಬಹುದಾದ ಸೇವೆಯನ್ನು ಹೊರತುಪಡಿಸಿ ಇತರ ಯಾವ ಸೇವೆಗೆ ಹಣ ಸಂದಾಯ ಮಾಡಲಾಗಿದೆಯೋ ಆ ಸೇವೆಯನ್ನು ನಿವೃತ್ತಿ ವೇತನಕ್ಕಾಗಿ ಕರ್ತವ್ಯವಾಗಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಪರಿಗಣಿಸಬೇಕೆಂದು, ಸರ್ಕಾರವು ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅನುಮತಿ ನೀಡಬಹುದು ...... "

ಈ ನಿಯಮದ ಸ್ಪಷ್ಟ ಪಠ್ಯ ಮತ್ತು ಸಂದರ್ಭವು, ನಿವೃತ್ತಿ ವೇತನದ ಉದ್ದೇಶಕ್ಕಾಗಿ ಹಿಂದಿನ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಸಾಕಷ್ಟು ಸೂಚನೆಯನ್ನು ನೀಡುತ್ತದೆ.

(ii) ಈ ನಿಯಮದ ಈ ಕೆಳಗಿನ ಟಿಪ್ಪಣಿಯು, ನಿಯಮದ ಉದ್ದೇಶ ಮತ್ತು ವಸ್ತು ವಿಷಯವನ್ನು ವಿಶದೀಕರಿಸುತ್ತದೆ; ಸದರಿ ಟಿಪ್ಪಣಿಯನ್ನು ಈ ಕೆಳಗಿನಂತೆ ಓದಲಾಗಿದೆ:

" (ಟಿಪ್ಪಣಿ.- [ರಾಜ್ಯ ಸರ್ಕಾರದಿಂದ ಅನುದಾನಗಳನ್ನು ಪಡೆಯುವ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ಸ್ವಾಯತ್ತ ಸಂಸ್ಥೆಗಳಲ್ಲಿನ ಸೇವೆಯ ಮುಂದುವರಿಕೆಯಲ್ಲಿ, ಸರ್ಕಾರದ ಅಧೀನದಲ್ಲಿ ನಿವೃತ್ತಿ ವೇತನ ನೀಡಬಹುದಾದ ಸೇವೆಯನ್ನು ಸಲ್ಲಿಸಿರುವಲ್ಲಿ, ಅಂಥ ಸ್ಥಳೀಯ ಪ್ರಾಧಿಕಾರದಲ್ಲಿ ಅಥವಾ ರಾಜ್ಯ ಸ್ವಾಯತ್ತ ಸಂಸ್ಥೆಗಳಲ್ಲಿ ಸಲ್ಲಿಸಿದ ಸೇವೆಗಳನ್ನು, ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ನಿವೃತ್ತಿ ವೇತನಕ್ಕಾಗಿ ಅರ್ಹ ಸೇವೆಯೆಂದು ಪರಿಗಣಿಸತಕ್ಕದ್ದು, ಎ ೦ ದರೆ.-] "

ಈ ಟಿಪ್ಪಣಿಯ ಸರಳ ಭಾಷೆಯು, ಕೆಲವು ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಅರ್ಜಿದಾರನ ಹಿಂದಿನ ಸರ್ಕಾರಿ ಸೇವೆಯನ್ನು ಪರಿಗಣಿಸಲು ಮಾಡಿರುವ ಆತನ ಕ್ಲೇಮನ್ನು ಮತ್ತಷ್ಟು ಬಲಪಡಿಸುತ್ತದೆ; ಮತ್ತೊಂದು ಸರ್ಕಾರಿ ಇಲಾಖೆಯಲ್ಲಿ ಹಿಂದಿನ ಸೇವೆಯನ್ನು ಸಲ್ಲಿಸಿದಾಗ ಮಾತ್ರ ಅದು ಪರಿಗಣನೀಯವಾಗುತ್ತದೆ ಎಂಬ ಪ್ರತ್ಯರ್ಜಿದಾರರ ವಾದವನ್ನು, ಈ ಟಿಪ್ಪಣಿಯ ಭಾಷೆಯನ್ನು ಲೆಕ್ಕಿಸದೆ ಸಮರ್ಥಿಸಲಾಗುವುದಿಲ್ಲ; ಸರ್ವೋಚ್ಚ ನ್ಯಾಯಾಲಯವು, ತಾರಾ ಸಿಂಗ್ -ವಿರುದ್ಧ ರಾಜಸ್ಥಾನ ರಾಜ್ಯ ಎಐಆರ್ 1975 ಎಸ್ಸಿ 14, ಮೊಕದ್ದಮೆಯಲ್ಲಿ, ನಿಯಮದ ಕೆಳಗಿನ ಟಿಪ್ಪಣಿಯು, ಅದರ ವ್ಯಾಪ್ತಿಯನ್ನು ವಿಶದೀಕರಿಸಲು ಅಥವಾ ನಿರ್ಬಂಧಿಸಲು ಉದ್ದೇಶಿಸಿದೆ ಮತ್ತು ನಿಯಮಕ್ಕೆ ಎಷ್ಟು ಬಲವಿದೆಯೋ ಅಷ್ಟು ಬಲವನ್ನು ಟಿಪ್ಪಣಿಯು ಹೊಂದಿದೆ; ಪ್ರಶ್ನೆಯಲ್ಲಿರುವ ಟಿಪ್ಪಣಿಯು ಸ್ಪಷ್ಟವಾಗಿ ಸರ್ಕಾರಿ ನೌಕರನ ಪ್ರಯೋಜನಕ್ಕಾಗಿ ನಿಯಮದ ವಿವರಣೆಯಾಗಿದೆ; ಮತ್ತು,

(ii) ಒಂದೇ ಸರ್ಕಾರದ ಎರಡು ಇಲಾಖೆಗಳಲ್ಲಿ ಯಶಸ್ವಿಯಾಗಿ ಉದ್ಯೋಗಿಯು ಸೇವೆಯನ್ನು ಸಲ್ಲಿಸಿದ್ದಲ್ಲಿ, ಆತನು ಹಿಂದಿನ ಆತನ ಸೇವೆಯನ್ನು ಪರಿಗಣಿಸಿಕೊಳ್ಳಬಹುದು ಮತ್ತು ಅನ್ಯಥಾದಿನಾಂಕ: 17.10.2003 ರಂದು ಜಾರಿಗೆ ಬಂದ ಅಧಿಸೂಚನೆದಿನಾಂಕ: 10.10.2003 ರ ಮೂಲಕ ಸದರಿ ನಿಯಮಕ್ಕೆ ಸೇರಿಸಿದ ವಿವರಣೆಯ ಕಾರಣದಿಂದ ತಿರಸ್ಕರಣೆಗೆ ಒಳಗಾಗುತ್ತದೆ ಎಂಬುದು ಪ್ರತ್ಯರ್ಜಿದಾರರ ವಾದವಾಗಿದ್ದು, ಸದರಿ ವಿವರಣೆಯನ್ನು ಈ ಕೆಳಗಿನಂತೆ ಓದಲಾಗಿದೆ:

" ' 1 ಈ ನಿಯಮದ ಉದ್ದೇಶಕ್ಕಾಗಿ, ರಾಜ್ಯ ಸ್ವಾಯತ್ತ ಸಂಸ್ಥೆ ಎ 0 ದರೆ, ರಾಜ್ಯ ಸರ್ಕಾರದ ಅನುದಾನಗಳಿಂದ ಸಂಪೂರ್ಣವಾಗಿ ಅಥವಾ ಗಣನೀಯವಾಗಿ ಹಣಕಾಸು ಪಡೆಯುತ್ತಿರುವ ಒಂದು ಸಂಸ್ಥೆಯಾಗಿದೆ.ಗಣನೀಯವಾಗಿ ಎಂದರೆ, ಸ್ವಾಯತ್ತ ಸಂಸ್ಥೆಯ ವೆಚ್ಚದ ದ ಶೇಕಡಾ ಐವತ್ತರಷ್ಟಕ್ಕಿಂತ ಹೆಚ್ಚಿನ ಮೊತ್ತವನ್ನು ರಾಜ್ಯ ಸರ್ಕಾರದ ಅನುದಾನಗಳ ಮೂಲಕ ಭರಿಸುವುದಾಗಿದೆ.ರಾಜ್ಯ ಸ್ವಾಯತ್ತ ಸಂಸ್ಥೆಯು, ರಾಜ್ಯ ಶಾಸನಾತ್ಮಕ ಸಂಸ್ಥೆಯನ್ನು ಅಥವಾ ರಾಜ್ಯದ ವಿಶ್ವವಿದ್ಯಾನಿಲಯವನ್ನು ಒಳಗೊಳ್ಳುತ್ತದೆ, ಆದರೆ ಸಾರ್ವಜನಿಕ ಉದ್ಯಮ ಅಥವಾ ರಾಜ್ಯ ಅನುದಾನಿತ ಶಿಕ್ಷಣ ಸಂಸ್ಥೆಗಳನ್ನು ಹೊರತುಪಡಿಸುತ್ತದೆ. ]"

ಮೇಲಿನ ವಿವರಣೆಯಲ್ಲಿ ಬಳಸಿದ " ರಾಜ್ಯ ಸ್ವಾಯತ್ತ ಸಂಸ್ಥೆಯು, ರಾಜ್ಯ ಶಾಸನಾತ್ಮಕ ಸಂಸ್ಥೆಯನ್ನು ಅಥವಾ ರಾಜ್ಯ ವಿಶ್ವವಿದ್ಯಾನಿಲಯವನ್ನು ಒಳಗೊಳ್ಳುತ್ತದೆ " ಎಂಬ ಪದಪ್ರಯೋಗವು, ಅಂತರ್-ಇಲಾಖಾ ಸೇವೆಯು ಮಾತ್ರ ಪರಿಗಣಿಸಲು ಅರ್ಹವಾಗಿದೆ ಎಂಬ ಪ್ರತ್ಯರ್ಜಿದಾರರ ಧ್ವನಿಯನ್ನು ಅಡಗಿಸುತ್ತದೆ.

ಮೇಲಿನ ಸಂದರ್ಭಗಳ ಹಿನ್ನೆಲೆಯಲ್ಲಿ, ಈ ರಿಟ್ ಅರ್ಜಿಯು ಯಶಸ್ವಿಯಾಗಿದೆ; ಇತರ ಷರತ್ತುಗಳಿಗೆ ಒಳಪಟ್ಟು, ನಿವೃತ್ತಿ ವೇತನದ ಇತ್ಯರ್ಥದ ಉದ್ದೇಶಕ್ಕಾಗಿ, ಮೇಲೆ ಹೇಳಿದಂತೆ, ಸಹಾಯಕ ಶಿಕ್ಷಕನಾಗಿ ಅರ್ಜಿದಾರನು ಸಲ್ಲಿಸಿದ ಹಿಂದಿನ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳಲು ಎರಡನೇ ಪ್ರತ್ಯರ್ಜಿದಾರಿಗೆ ಎರಡು ತಿಂಗಳುಗಳ ಅವಧಿಯ ಒಳಗಾಗಿ ಪೂರ್ಣಗೊಳಿಸಬೇಕಾಗಿರುವ ಪರಮಾದೇಶದ ರಿಟ್ಟನ್ನು ಹೊರಡಿಸಲಾಗಿದೆ.

ಅರ್ಜಿದಾರನು ವೇತನ ರಕ್ಷಣೆಗಾಗಿನ ತನ್ನ ಅಹವಾಲನ್ನು ಪದ್ಯಾಲೋಚಿಸಲು ಸ್ವತಂತ್ರನಾಗಿದ್ದಾನೆ, ಮತ್ತು ಉತ್ತರ ನೀಡಬೇಕಿರುವ ಪ್ರತ್ಯರ್ಜಿದಾರರು ತ್ವರಿತವಾಗಿ ಕಾನೂನಿಗನುಸಾರವಾಗಿ ಅದನ್ನು ಪರಿಗಣಿಸುವುದು.ಪಕ್ಷಕಾರರ ಇತರ ಎಲ್ಲಾ ವಾದಗಳಿಗೆ ಅವಕಾಶವಿದೆ.

ವೆಚ್ಚಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.